**ಕರ್ನಾಟಕ ಸರ್ಕಾರ**

**ಆರ್ಥಿಕ ಸಚಿವಾಲಯ**

**ಸಂಖ್ಯೆ: ಎಫ್‌ಡಿ 7 ಎಸ್‌ಆರ್‌ಪಿ 2012**

**ಕರ್ನಾಟಕ ಸರ್ಕಾರ ಸಚಿವಾಲಯ**
**ವಿಧಾನ ಸೌಧ**
**ಬೆಂಗಳೂರು-1, ದಿನಾಂಕ 21ನೇ ಏಪ್ರಿಲ್ 2012**

**ಅಧಿಸೂಚನೆ**

ಕರ್ನಾಟಕ ರಾಜ್ಯ ನಾಗರಿಕ ಸೇವಾ ಅಧಿನಿಯಮ, 1978ರ (1990ನೇ ಕರ್ನಾಟಕ ಅಧಿನಿಯಮದ ಸಂಖ್ಯೆ: 14) ಪ್ರಕರಣ 3ರ ಉಪ-ಪ್ರಕರಣ (2)ರ ಪರಂತುಕದೊಡನೆ ಓದಿಕೊಂಡ, ಸದರಿ ಪ್ರಕರಣದ (1)ನೇ ಉಪ-ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ರಾಜ್ಯ ಸರ್ಕಾರವು ಈ ಮೂಲಕ ಈ ಮುಂದಿನ ನಿಯಮಗಳನ್ನು ರಚಿಸಿದೆ; ಎಂದರೆ:-

1. **ಚಿಕ್ಕ ಹೆಸರು ಮತ್ತು ಪ್ರಾರಂಭ:-** (1) ಈ ನಿಯಮಗಳನ್ನು ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳು, 2012 ಎಂದು ಕರೆಯತಕ್ಕದ್ದು.

(2) ಅವು 2012ರ ಏಪ್ರಿಲ್ ಮೊದಲನೇ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. **ಅನ್ವಯ:-** (1) ಈ ನಿಯಮಗಳಿಂದ ಅಥವಾ ಇವುಗಳ ಮೇರೆಗೆ ಅನ್ಯಥಾ ಉಪಬಂಧಿಸದ ಹೊರತು, ಈ ನಿಯಮಗಳು ಸರ್ಕಾರಿ ಸೇವೆಗಳಿಗೆ ಮತ್ತು ಕರ್ನಾಟಕ ರಾಜ್ಯದ ವ್ಯವಹಾರಗಳ ಸಂಬಂಧದಲ್ಲಿನ ಹುದ್ದೆಗಳಿಗೆ ನೇಮಕಗೊಂಡ ವ್ಯಕ್ತಿಗಳಿಗೆ ಅನ್ವಯಿಸತಕ್ಕದ್ದು.

**(2) ಈ ನಿಯಮಗಳು ಈ ಕೆಳಗಿನವರಿಗೆ ಅನ್ವಯಿಸತಕ್ಕದ್ದಲ್ಲ:-**

(ಅ) ಸರ್ಕಾರವು ಹೊರಡಿಸಿದ ಆದೇಶದ ಮೂಲಕ ಅನ್ಯಥಾ ಉಪಬಂಧಿಸದ ಹೊರತು, ಸರ್ಕಾರಿ ಸೇವೆಗಳ ನಿಯತ ಸಿಬ್ಬಂದಿ ವರ್ಗದಲ್ಲಿನ ಯಾವುದೇ ಹುದ್ದೆಯ ಮೇಲೆ ಧಾರಣಾಧಿಕಾರ ಹೊಂದಿಲ್ಲದ ಕಾಮಗಾರಿ ಹಣದಿಂದ ಸಂಬಳ ಪಡೆಯುವ ಸಿಬ್ಬಂದಿ ವರ್ಗಕ್ಕೆ ಸೇರಿದ ವ್ಯಕ್ತಿಗಳಿಗೆ;

(ಆ) ಸರ್ಕಾರವು ಹೊರಡಿಸಿದ ಆದೇಶದ ಮೂಲಕ ಅನ್ಯಥಾ ಉಪಬಂಧಿಸದ ಹೊರತು, ಸಾದಿಲ್ವಾರು ನಿಧಿಗಳಿಂದ ಸಂಬಳ ನೀಡಲಾಗುವ ವ್ಯಕ್ತಿಗಳಿಗೆ;

(ಇ) ಗಂಟೆ, ದಿನ, ವಾರ ಅಥವಾ ಮಾಸಿಕ ದರಗಳ ಆಧಾರದ ಮೇಲೆ ಮಜೂರಿಗಳನ್ನು ನೀಡಲಾಗುವ ವ್ಯಕ್ತಿಗಳಿಗೆ;

(ಈ) ಪೂರ್ಣಕಾಲಿಕ ಉದ್ಯೋಗದಲ್ಲಿರದ ವ್ಯಕ್ತಿಗಳಿಗೆ;

(ಉ) ಚಿಲ್ಲರೆ ಕೆಲಸದ ದರದ ಆಧಾರದ ಮೇಲೆ ಮಜೂರಿ ನೀಡಲಾಗುವ ವ್ಯಕ್ತಿಗಳಿಗೆ;

(ಊ) ಕರಾರಿನಲ್ಲಿ ಅನ್ಯಥಾ ಉಪಬಂಧಿಸಲಾಗಿದ್ದ ಹೊರತು, ಕರಾರು ಆಧಾರದ ಮೇಲೆ ನೇಮಕಗೊಂಡ ವ್ಯಕ್ತಿಗಳಿಗೆ;

(ಋ) ಸಂಚಿತ ವೇತನ ಅಥವಾ ಸಂಬಳದ ಆಧಾರದ ಮೇಲೆ ನೇಮಕಗೊಂಡ ವ್ಯಕ್ತಿಗಳಿಗೆ;

(ೠ) ನಿವೃತ್ತಿ ನಂತರ ಸರ್ಕಾರಿ ಸೇವೆಗಳಲ್ಲಿ ಮರುನೇಮಕಗೊಂಡ ವ್ಯಕ್ತಿಗಳಿಗೆ;

(ಎ) ಭಾರತ ಸಂವಿಧಾನದ 187ನೇ ಅನುಚ್ಛೇದದ (3)ನೇ ಖಂಡ, 229ನೇ ಅನುಚ್ಛೇದದ (2)ನೇ ಖಂಡದ ಅಥವಾ 318ನೇ ಅನುಚ್ಛೇದದ (ಬಿ) ಉಪಖಂಡದ ಮೇರೆಗೆ ರಚಿಸಲಾದ ನಿಯಮಗಳ ಮೂಲಕ ಯಾವ ವ್ಯಕ್ತಿಗಳ ಸೇವಾ ಷರತ್ತುಗಳನ್ನು ಕ್ರಮಬದ್ಧಗೊಳಿಸಲಾಗಿದೆಯೋ ಆ ವ್ಯಕ್ತಿಗಳಿಗೆ;

(ಏ) ಯು.ಜಿ.ಸಿ/ಎ.ಐ.ಸಿ.ಟಿ.ಇ/ಐ.ಸಿ.ಎ.ಆರ್ ವೇತನ ಶ್ರೇಣಿಗಳಲ್ಲಿ ವೇತನ ಪಡೆಯುತ್ತಿರುವ ವ್ಯಕ್ತಿಗಳಿಗೆ;

(ಐ) ರಾಷ್ಟ್ರೀಯ ನ್ಯಾಯಿಕ ವೇತನ ಆಯೋಗದ ವೇತನ ಶ್ರೇಣಿಗಳಲ್ಲಿ ವೇತನ ಪಡೆಯುತ್ತಿರುವ ರಾಜ್ಯ ನ್ಯಾಯಾಂಗ ಸೇವೆಗೆ ಸೇರಿದ ಅಧಿಕಾರಿಗಳು; ಮತ್ತು

(ಒ) ಸರ್ಕಾರದ ಅಧೀನದಲ್ಲಿ ಕಾರ್ಯನಿರ್ವಹಿಸುವ ಅಖಿಲ ಭಾರತ ಸೇವೆಗಳಿಗೆ ಸೇರಿದ ವ್ಯಕ್ತಿಗಳಿಗೆ;

(ಓ) ಸರ್ಕಾರವು, ಆದೇಶದ ಮೂಲಕ, ಈ ನಿಯಮಗಳ ಎಲ್ಲಾ ಅಥವಾ ಯಾವುದೇ ಉಪಬಂಧಗಳ ಪ್ರವರ್ತನೆಯಿಂದ ನಿರ್ದಿಷ್ಟವಾಗಿ ಹೊರತುಪಡಿಸಬಹುದಾದ ಯಾವುದೇ ಇತರ ವರ್ಗ ಅಥವಾ ಪ್ರವರ್ಗದ ವ್ಯಕ್ತಿಗಳಿಗೆ.

3. **ಪರಿಭಾಷೆಗಳು:– ಈ ನಿಯಮಗಳಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸದ ಹೊರತು:–**

(ಅ) **'ಮೂಲ ವೇತನ'** ಎಂದರೆ ಸರ್ಕಾರಿ ನೌಕರನು 'ಪ್ರಸಕ್ತ ಶ್ರೇಣಿ'ಯಲ್ಲಿ 2012ರ ಏಪ್ರಿಲ್ 1 ರಂದು ಅಥವಾ ಆ ತರುವಾಯ ಯಾವುದೇ ದಿನಾಂಕದಂದು 'ಪರಿಷ್ಕೃತ ಶ್ರೇಣಿ' ಯಲ್ಲಿ ಅವನ ವೇತನವನ್ನು ಪುನ: ನಿಗದಿಪಡಿಸಲಾಗುವ ದಿನದಂದು ಅವನು ಪಡೆಯುತ್ತಿದ್ದ ಮೂಲ ವೇತನ ಮತ್ತು ಅದು ಈ ಮುಂದಿನವುಗಳನ್ನು ಒಳಗೊಳ್ಳುತ್ತದೆ, ಎಂದರೆ –

(i) ವಾರ್ಷಿಕ ವೇತನ ಬಡ್ತಿ;

(ii) ಪ್ರಸಕ್ತ ಶ್ರೇಣಿಯ ಗರಿಷ್ಠ ವೇತನಕ್ಕಿಂತ ಹೆಚ್ಚಿಗೆಯಾಗಿ ನೀಡಲಾದ ಸ್ಥಗಿತ ವೇತನ ಬಡ್ತಿ;

(iii) 2007ರ ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳ 7ನೇ ನಿಯಮದ (3)ನೇ ಉಪನಿಯಮದ ಮೇರೆಗೆ ನೀಡಲಾದ ವೈಯಕ್ತಿಕ ವೇತನ;

(iv) ಪ್ರಸಕ್ತ ಶ್ರೇಣಿಯ ಗರಿಷ್ಠ ವೇತನಕ್ಕಿಂತ ಹೆಚ್ಚಿಗೆಯಾಗಿ ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 13 ಎಸ್‌ಆರ್‌ಪಿ 2002 ದಿನಾಂಕ 9-5-2002 ರನ್ವಯ ನೀಡಲಾದ ಹೆಚ್ಚುವರಿ ವೇತನ ಬಡ್ತಿ;

ಪರಂತು, ಅದು ಈ ಮುಂದಿನವುಗಳನ್ನು ಒಳಗೊಳ್ಳತಕ್ಕದ್ದಲ್ಲ; ಎಂದರೆ –

(i) ವಿಶೇಷ ಭತ್ಯೆ;

(ii) ಮೇಲೆ (iii) ರಲ್ಲಿ ನಮೂದಿಸಲಾದುದನ್ನು ಹೊರತುಪಡಿಸಿ ವೈಯಕ್ತಿಕ ವೇತನ;

(iii) ತಾಂತ್ರಿಕ ವೇತನ; ಮತ್ತು

(iv) ಕರ್ನಾಟಕ ನಾಗರಿಕ ಸೇವಾ ನಿಯಮಗಳ 8ನೇ ನಿಯಮದ ಉಪನಿಯಮ (32)ರ ಮೇರೆಗೆ, ಸರ್ಕಾರವು ವೇತನವೆಂದು ವಿಶೇಷವಾಗಿ ವರ್ಗೀಕರಿಸಿದ ಯಾವುದೇ ಇತರ ಉಪಲಬ್ಧಗಳು.

(ಆ) ಸರ್ಕಾರಿ ನೌಕರನಿಗೆ ಸಂಬಂಧಿಸಿದಂತೆ 'ಪ್ರಸಕ್ತ ಶ್ರೇಣಿ' ಎಂದರೆ ಖಾಯಂ ಅಥವಾ ಸ್ಥಾನಪನ್ನ ಅಥವಾ ತಾತ್ಕಾಲಿಕ ಸಾಮರ್ಥ್ಯದಲ್ಲಿ 2012ರ ಏಪ್ರಿಲ್ 1ನೇ ದಿನಾಂಕದಂದು ಅವನು ಹೊಂದಿದ್ದ ಹುದ್ದೆಗೆ ಅನ್ವಯವಾಗುವ '2007ರ ಶ್ರೇಣಿ' ಮತ್ತು ಸದರಿ ಹುದ್ದೆಗೆ ಸಂಬಂಧಿಸಿದಂತೆ ಅವನಿಗೆ ಅನ್ವಯವಾಗುವ ವೈಯಕ್ತಿಕ ಶ್ರೇಣಿ, ಯಾವುದಾದರೂ ಇದ್ದಲ್ಲಿ ಮತ್ತು ಸದರಿ ಹುದ್ದೆಗೆ ನೀಡಲಾದ 'ಪ್ರಸಕ್ತ ಆಯ್ಕೆಕಾಲಿಕ ಶ್ರೇಣಿ' ಅಥವಾ 'ಪ್ರಸಕ್ತ ಹಿರಿಯ ವೇತನ ಶ್ರೇಣಿ' ಇವುಗಳಲ್ಲಿ ಯಾವುದಾದರೊಂದನ್ನು ಅವನಿಗೆ ನೀಡಿದ್ದಲ್ಲಿ ಅದೂ ಒಳಗೊಳ್ಳುತ್ತದೆ.

(ಇ) ಒಂದು ಹುದ್ದೆಯನ್ನು ಧಾರಣ ಮಾಡಿರುವ ಸರ್ಕಾರಿ ನೌಕರನಿಗೆ ಸಂಬಂಧಿಸಿದಂತೆ 'ಪ್ರಸಕ್ತ ಆಯ್ಕೆಕಾಲಿಕ ವೇತನ ಶ್ರೇಣಿ' ಎಂದರೆ ಕಾಲಕಾಲಕ್ಕೆ ತಿದ್ದುಪಡಿಗೊಂಡ 1983ರ ಕರ್ನಾಟಕ ನಾಗರಿಕ ಸೇವಾ (ಕಾಲಬದ್ಧ ಬಡ್ತಿ) ನಿಯಮಗಳ ಉಪಬಂಧಗಳಿಗೆ ಅನುಸಾರವಾಗಿ ಸದರಿ ಹುದ್ದೆಯ ಸಂಬಂಧದಲ್ಲಿ 2012ರ ಏಪ್ರಿಲ್ 1ಕ್ಕೆ ಪೂರ್ವದಲ್ಲಿ ಅವನಿಗೆ ನೀಡಲಾದ ಆಯ್ಕೆಕಾಲಿಕ ವೇತನ ಶ್ರೇಣಿ;

(ಈ) ಒಂದು ಹುದ್ದೆಯನ್ನು ಧಾರಣ ಮಾಡಿರುವ ಸರ್ಕಾರಿ ನೌಕರನಿಗೆ ಸಂಬಂಧಿಸಿದಂತೆ 'ಪ್ರಸಕ್ತ ಹಿರಿಯ ವೇತನ ಶ್ರೇಣಿ' ಎಂದರೆ ಕಾಲಕಾಲಕ್ಕೆ ತಿದ್ದುಪಡಿಗೊಂಡ 1991ರ ಕರ್ನಾಟಕ ನಾಗರಿಕ ಸೇವಾ (ಹಿರಿಯ ವೇತನ ಶ್ರೇಣಿಗೆ ಸ್ವಯಂಚಾಲಿತ ವಿಶೇಷ ಮುಂಬಡ್ತಿ ನೀಡುವಿಕೆ) ನಿಯಮಗಳ ಉಪಬಂಧಗಳಿಗೆ ಅನುಸಾರವಾಗಿ ಸದರಿ ಹುದ್ದೆಯ ಸಂಬಂಧದಲ್ಲಿ 2012ರ ಏಪ್ರಿಲ್ 1ಕ್ಕೆ ಪೂರ್ವದಲ್ಲಿ ಅವನಿಗೆ ನೀಡಲಾದ ಹಿರಿಯ ವೇತನ ಶ್ರೇಣಿ;

(ಉ) 'ಸರ್ಕಾರ' ಎಂದರೆ ಕರ್ನಾಟಕ ಸರ್ಕಾರ;

(ಊ) ಒಂದು ಹುದ್ದೆಗೆ ಸಂಬಂಧಿಸಿದಂತೆ '2007ರ ಶ್ರೇಣಿ' ಎಂದರೆ 2007ರ ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳ ಮೂಲಕ ಅಥವಾ ನಿಯಮಗಳ ಮೇರೆಗೆ ಆ ಹುದ್ದೆಗೆ ಗೊತ್ತುಪಡಿಸಲಾದ ವೇತನ ಶ್ರೇಣಿ;

(ಋ) ಒಂದು ಹುದ್ದೆಗೆ ಸಂಬಂಧಿಸಿದಂತೆ 'ಪರಿಷ್ಕೃತ ಶ್ರೇಣಿ' ಎಂದರೆ 4ನೇ ನಿಯಮದ (2)ನೇ ಉಪನಿಯಮದ ಮೇರೆಗೆ ಆ ಹುದ್ದೆಗೆ ಪ್ರತ್ಯೇಕವಾಗಿ ಪರಿಷ್ಕೃತ ಶ್ರೇಣಿಯನ್ನು ಅಧಿಸೂಚಿಸಿದ್ದ ಹೊರತು, ಮೊದಲನೇ ಅನುಸೂಚಿಯ ಭಾಗ-ಎ ರಲ್ಲಿನ (2)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾದಂತೆ ಅದಕ್ಕೆ ಅನ್ವಯವಾಗುವ 'ಪ್ರಸಕ್ತ ಶ್ರೇಣಿ'ಯ ಎದುರಿಗೆ ಅದರ (3)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾದ ವೇತನ ಶ್ರೇಣಿ ಮತ್ತು ಅದರಲ್ಲಿ ಆ ಹುದ್ದೆಗೆ ಗೊತ್ತುಪಡಿಸಲಾದ 'ಪರಿಷ್ಕೃತ ಆಯ್ಕೆಕಾಲಿಕ ವೇತನ ಶ್ರೇಣಿ' ಮತ್ತು 'ಪರಿಷ್ಕೃತ ಹಿರಿಯ ವೇತನ ಶ್ರೇಣಿ', ಯಾವುದಾದರೂ ಇದ್ದರೆ, ಅದೂ ಸಹ ಸೇರುತ್ತದೆ;

(ೠ) ಹುದ್ದೆಯನ್ನು ಹೊಂದಿರುವ ಒಬ್ಬ ಸರ್ಕಾರಿ ನೌಕರನ ಸಂಬಂಧದಲ್ಲಿ 'ಪರಿಷ್ಕೃತ ಆಯ್ಕೆಕಾಲಿಕ ವೇತನ ಶ್ರೇಣಿ' ಎಂದರೆ 4ನೇ ನಿಯಮದ (3)ನೇ ಉಪ-ನಿಯಮದ ಮೂಲಕ ಗೊತ್ತುಪಡಿಸಲಾದ ಆಯ್ಕೆಕಾಲಿಕ ವೇತನ ಶ್ರೇಣಿ;

(ಎ) ಹುದ್ದೆಯನ್ನು ಹೊಂದಿರುವ ಒಬ್ಬ ಸರ್ಕಾರಿ ನೌಕರನ ಸಂಬಂಧದಲ್ಲಿ 'ಪರಿಷ್ಕೃತ ಹಿರಿಯ ವೇತನ ಶ್ರೇಣಿ' ಎಂದರೆ 4ನೇ ನಿಯಮದ (4)ನೇ ಉಪನಿಯಮದ ಮೂಲಕ ಗೊತ್ತುಪಡಿಸಲಾದ ಹಿರಿಯ ವೇತನ ಶ್ರೇಣಿ;

(ಏ) 'ಅನುಸೂಚಿ' ಎಂದರೆ ಈ ನಿಯಮಗಳಿಗೆ ಲಗತ್ತಿಸಲಾದ ಅನುಸೂಚಿ;

(ಐ) 'ಕೋಷ್ಟಕ' ಎಂದರೆ ಈ ನಿಯಮಗಳಿಗೆ ಲಗತ್ತಿಸಲಾದ ಕೋಷ್ಟಕ;

4. **ಹುದ್ದೆಗಳ ವೇತನ ಶ್ರೇಣಿ:-** (1) ಉಪ-ನಿಯಮ (2), (3) ಮತ್ತು (4)ರ ಉಪಬಂಧಗಳಿಗೊಳಪಟ್ಟು, ಈ ನಿಯಮಗಳ ಪ್ರಾರಂಭದ ದಿನಾಂಕದಿಂದ ಯಾವುದೇ ಹುದ್ದೆಗೆ ಅನ್ವಯವಾಗುವ ವೇತನ ಶ್ರೇಣಿಯು, ಮೊದಲನೇ ಅನುಸೂಚಿಯ ಭಾಗ-ಎ ರಲ್ಲಿನ (2)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾದ, ಪ್ರಸಕ್ತ ಶ್ರೇಣಿಯ ಎದುರಿಗೆ ಅದರ (3)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾದ 'ಪರಿಷ್ಕೃತ ಶ್ರೇಣಿ' ಯಾಗಿರತಕ್ಕದ್ದು.

(2) ಸರ್ಕಾರವು, ಯಾವುದೇ ಹುದ್ದೆಗೆ ಮೊದಲನೇ ಅನುಸೂಚಿಯ ಭಾಗ-ಎ ರಲ್ಲಿನ (3)ನೇ ಅಂಕಣದಲ್ಲಿ ಸಂವಾದಿ ನಮೂದಿನಲ್ಲಿ ನಿರ್ದಿಷ್ಟಪಡಿಸಿರುವ ಶ್ರೇಣಿಯಲ್ಲದ ಬೇರೊಂದು 'ಪರಿಷ್ಕೃತ ಶ್ರೇಣಿ'ಯನ್ನು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚಿಸುವ ಮೂಲಕ, 2012ರ ಏಪ್ರಿಲ್ 1 ರಿಂದ ಅಥವಾ ಸೂಕ್ತವೆಂದು ಭಾವಿಸಬಹುದಾದಂತಹ ಆನಂತರದ ದಿನಾಂಕದಿಂದ ಜಾರಿಗೆ ಬರುವಂತೆ ಮಂಜೂರು ಮಾಡಬಹುದು.

(3) ಈ ನಿಯಮಗಳು ಪ್ರಾರಂಭವಾದ ದಿನಾಂಕದಿಂದ, ಕಾಲಕಾಲಕ್ಕೆ ಪರಿಷ್ಕೃತಗೊಂಡ 1983ರ ಕರ್ನಾಟಕ ನಾಗರಿಕ ಸೇವಾ (ಕಾಲಬದ್ಧ ಬಡ್ತಿ) ನಿಯಮಗಳ ಉಪಬಂಧಗಳಿಗನುಗುಣವಾಗಿ, ಒಂದು ಹುದ್ದೆಯನ್ನು ಧಾರಣ ಮಾಡಿರುವ ಸರ್ಕಾರಿ ನೌಕರನಿಗೆ ಸಂಬಂಧಿಸಿದಂತೆ ದೊರೆಯುವ ಆಯ್ಕೆಕಾಲಿಕ ವೇತನ ಶ್ರೇಣಿಯು ಎರಡನೇ ಅನುಸೂಚಿಯ (2)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿರುವಂತೆ ಹುದ್ದೆಗೆ ಅನ್ವಯವಾಗುವ 'ಪರಿಷ್ಕೃತ ವೇತನ ಶ್ರೇಣಿ'ಯ ಎದುರಿಗೆ (3)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿದ 'ಪರಿಷ್ಕೃತ ಆಯ್ಕೆಕಾಲಿಕ ವೇತನ ಶ್ರೇಣಿ' ಯಾಗಿರತಕ್ಕದ್ದು.

ಪರಂತು, ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ ಶ್ರೇಣಿ) ನಿಯಮಗಳು, 2007 ರಲ್ಲಿ ದಿನಾಂಕ 1-7-2005 ರಿಂದ ಜಾರಿಗೆ ಬರುವಂತೆ ಐದು ನೂತನ ವೇತನ ಶ್ರೇಣಿಗಳನ್ನು ಜಾರಿಗೆ ತಂದಿರುವುದರಿಂದ, 1999ರ ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳಡಿ ವೇತನ ಶ್ರೇಣಿಯನ್ನು ಹೊಂದಿರುವ

ಹುದ್ದೆಯನ್ನು ಧಾರಣ ಮಾಡಿರುವ ಒಬ್ಬ ಸರ್ಕಾರಿ ನೌಕರನಿಗೆ ಕಾಲಮಿತಿ ವೇತನ ಬಡ್ತಿಯನ್ನು ದಿನಾಂಕ 01-07-2005ರ ಪೂರ್ವದಲ್ಲಿ 1983ರ ಕರ್ನಾಟಕ ನಾಗರಿಕ ಸೇವಾ (ಕಾಲಬದ್ಧ ಬಡ್ತಿ) ನಿಯಮಗಳಡಿ ಮಂಜೂರು ಮಾಡಿದಲ್ಲಿ, ಅಂತಹ ಆಯ್ಕೆ ಕಾಲಿಕ ವೇತನ ಶ್ರೇಣಿಗೆ ಅನುಗುಣವಾಗಿರುವ ಪರಿಷ್ಕೃತ ವೇತನ ಶ್ರೇಣಿಯನ್ನು ಅವನಿಗೆ ವೈಯಕ್ತಿಕವಾಗಿ ನೀಡತಕ್ಕದ್ದು.

(4) ಈ ನಿಯಮಗಳು ಪ್ರಾರಂಭವಾದ ದಿನಾಂಕದಿಂದ, ಕಾಲಕಾಲಕ್ಕೆ ಪರಿಷ್ಕೃತಗೊಂಡ 1991ರ ಕರ್ನಾಟಕ ನಾಗರಿಕ ಸೇವಾ (ಹಿರಿಯ ವೇತನ ಶ್ರೇಣಿಗೆ ಸ್ವಯಂಚಾಲಿತ ವಿಶೇಷ ಮುಂಬಡ್ತಿ ನೀಡುವಿಕೆ) ನಿಯಮಗಳ ಉಪಬಂಧಗಳಿಗನುಗುಣವಾಗಿ ಹುದ್ದೆಯನ್ನು ಧಾರಣ ಮಾಡಿರುವ ಸರ್ಕಾರಿ ನೌಕರನಿಗೆ ಸಂಬಂಧಿಸಿದಂತೆ ದೊರೆಯುವ ಹಿರಿಯ ವೇತನ ಶ್ರೇಣಿಯು, 1983ರ ಕರ್ನಾಟಕ ನಾಗರಿಕ ಸೇವಾ (ಕಾಲಬದ್ಧ ಬಡ್ತಿ) ನಿಯಮಗಳ ಮೇರೆಗೆ ಮಂಜೂರು ಮಾಡಿದ 'ಪರಿಷ್ಕೃತ ಆಯ್ಕೆ ಕಾಲಿಕ ವೇತನ ಶ್ರೇಣಿ'ಯ ನಂತರದ 'ಪರಿಷ್ಕೃತ ವೇತನ ಶ್ರೇಣಿ' ಆಗಿರುತ್ತದೆ ಅಥವಾ ಸರ್ಕಾರಿ ನೌಕರನು ಧಾರಣ ಮಾಡಿರುವ ಹುದ್ದೆಗೆ ಅನ್ವಯವಾಗುವಂತೆ 1983ರ ಕರ್ನಾಟಕ ನಾಗರಿಕ ಸೇವಾ (ಕಾಲಬದ್ಧ ಬಡ್ತಿ) ನಿಯಮಗಳಿಗನುಗುಣವಾಗಿ ಮಂಜೂರಾದ 'ಪರಿಷ್ಕೃತ ಆಯ್ಕೆಕಾಲಿಕ ವೇತನ ಶ್ರೇಣಿ' ಹಾಗೂ ಮುಂಬಡ್ತಿ ಹುದ್ದೆಯ 'ಪರಿಷ್ಕೃತ ವೇತನ ಶ್ರೇಣಿ'ಯೂ ಒಂದೇ ಆಗಿದ್ದಲ್ಲಿ ಅಥವಾ ಸರಿಸಮಾನವಾಗಿದ್ದಲ್ಲಿ, ಮುಂಬಡ್ತಿ ಹುದ್ದೆಯ 'ಪರಿಷ್ಕೃತ ವೇತನ ಶ್ರೇಣಿ' ಯಾಗಿರುತ್ತದೆ.

5. **'ಪರಿಷ್ಕೃತ ವೇತನ ಶ್ರೇಣಿ'ಯಲ್ಲಿ ವೇತನ ಪಡೆಯುವುದು:-** ಈ ನಿಯಮಗಳಲ್ಲಿ ಅನ್ಯಥಾ ಉಪಬಂಧಿಸಿದ ಹೊರತು, ಸರ್ಕಾರಿ ನೌಕರನು ತಾನು ಯಾವ ಹುದ್ದೆಗೆ ನಿಯೋಜಿತನಾಗಿರುವನೋ ಆ ಹುದ್ದೆಗೆ ಅನ್ವಯವಾಗುವ 'ಪರಿಷ್ಕೃತ ಶ್ರೇಣಿ' ಯಲ್ಲಿ ವೇತನವನ್ನು ಪಡೆಯತಕ್ಕದ್ದು.

6. **'ಪರಿಷ್ಕೃತ ವೇತನ ಶ್ರೇಣಿ'ಯ ಅನ್ವಯ:-** ಈ ನಿಯಮಗಳ ಇತರ ಉಪಬಂಧಗಳಿಗೊಳಪಟ್ಟು 'ಪರಿಷ್ಕೃತ ವೇತನ ಶ್ರೇಣಿ'ಯು –

(ಅ) 2012ರ ಏಪ್ರಿಲ್ 1 ಕ್ಕೆ ಮುಂಚಿತವಾಗಿ ಸೇವೆಗೆ ಸೇರಿದ ಮತ್ತು ಆ ದಿನಾಂಕದಲ್ಲಿ ಸೇವೆಯಲ್ಲಿದ್ದ ಸರ್ಕಾರಿ ನೌಕರ;

(ಆ) 2012ರ ಏಪ್ರಿಲ್ 1 ಕ್ಕೆ ಮುಂಚಿತವಾಗಿ ಪ್ರಸಕ್ತ 'ಆಯ್ಕೆಕಾಲಿಕ ವೇತನ ಶ್ರೇಣಿ' ಮಂಜೂರಾದಂಥ ಸರ್ಕಾರಿ ನೌಕರ;

(ಇ) 2012ರ ಏಪ್ರಿಲ್ 1 ಕ್ಕೆ ಮುಂಚಿತವಾಗಿ ಪ್ರಸಕ್ತ 'ಹಿರಿಯ ವೇತನ ಶ್ರೇಣಿ' ಮಂಜೂರಾದಂಥ ಸರ್ಕಾರಿ ನೌಕರ;

(ಈ) 2012ರ ಏಪ್ರಿಲ್ 1 ಕ್ಕೆ ಮುಂಚಿತವಾಗಿ ಅಥವಾ 2012ರ ಏಪ್ರಿಲ್ 1 ರಂದು ಅಥವಾ ನಂತರ ತಾನು ಧಾರಣ ಮಾಡಿದ್ದ ಹುದ್ದೆಯಲ್ಲದ ಬೇರೊಂದು ಹುದ್ದೆಯ ಸೇವೆಗೆ ಸೇರಿದ ಅಥವಾ ಬಡ್ತಿ ಹೊಂದಿದ ಅಥವಾ ನೇಮಕಗೊಂಡ ಸರ್ಕಾರಿ ನೌಕರ;

(ಉ) 2012ರ ಏಪ್ರಿಲ್ 1 ರಂದು ಅಥವಾ ನಂತರ 'ಪರಿಷ್ಕೃತ ಆಯ್ಕೆಕಾಲಿಕ ವೇತನ ಶ್ರೇಣಿ' ಯನ್ನು ಮಂಜೂರು ಮಾಡಬಹುದಾದಂತಹ ಸರ್ಕಾರಿ ನೌಕರ; ಮತ್ತು

(ಊ) 2012ರ ಏಪ್ರಿಲ್ 1 ರಂದು ಅಥವಾ ನಂತರ 'ಪರಿಷ್ಕೃತ ಹಿರಿಯ ವೇತನ ಶ್ರೇಣಿ' ಯನ್ನು ಮಂಜೂರು ಮಾಡಬಹುದಾದಂತಹ ಸರ್ಕಾರಿ ನೌಕರನಿಗೆ ಅನ್ವಯವಾಗತಕ್ಕದ್ದು.

**7. 'ಪರಿಷ್ಕೃತ ವೇತನ ಶ್ರೇಣಿ' ಯಲ್ಲಿ ಪ್ರಾರಂಭಿಕ ವೇತನವನ್ನು ನಿಗದಿಪಡಿಸುವುದು:–**

(1) 6ನೇ ನಿಯಮದ (ಅ), (ಆ) ಮತ್ತು (ಇ) ಖಂಡಗಳಲ್ಲಿ ಉಲ್ಲೇಖಿಸಿದಂಥ ಸರ್ಕಾರಿ ನೌಕರನ ಪ್ರಾರಂಭಿಕ ವೇತನವನ್ನು, ಸರ್ಕಾರವು ವಿಶೇಷ ಆದೇಶಗಳ ಮೂಲಕ ಅನ್ಯಥಾ ಆದೇಶಿಸದ ಹೊರತು, ಅವನಿಗೆ ಅನ್ವಯವಾಗುವ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಪ್ರತ್ಯೇಕವಾಗಿ ನಿಗದಿಗೊಳಿಸತಕ್ಕದ್ದು:–

(ಅ) 2012ರ ಏಪ್ರಿಲ್ 1 ರಂದು ಅವನು ಧಾರಣ ಮಾಡಿದ್ದ ಹುದ್ದೆಗೆ ಸಂಬಂಧಿಸಿದಂತೆ; ಮತ್ತು

(ಆ) ಅವನು ಉನ್ನತ ಹುದ್ದೆಯನ್ನು ಸ್ಥಾನಪನ್ನವಾಗಿ ಧಾರಣ ಮಾಡಿರದಿದ್ದ ಪಕ್ಷದಲ್ಲಿ, ಆ ದಿನಾಂಕದಂದು ಅವನು ಧಾರಣ ಮಾಡಿರಬಹುದಾದಂಥ ಕೆಳಗಿನ ಹುದ್ದೆ ಯಾವುದಾದರೂ ಇದ್ದರೆ, ಅದಕ್ಕೆ ಸಂಬಂಧಿಸಿದಂತೆ.

(2) ಪ್ರಾರಂಭಿಕ ವೇತನವನ್ನು ನಾಲ್ಕನೇ ಅನುಸೂಚಿಯ (1)ನೇ ಅಂಕಣದಲ್ಲಿ ಕಂಡು ಬರುವ 'ಪ್ರಸಕ್ತ ಶ್ರೇಣಿ'ಯಲ್ಲಿನ ಅವನ 'ಮೂಲ ವೇತನ'ಕ್ಕೆ ಸಂವಾದಿಯಾಗಿ ಆ ಅನುಸೂಚಿಯ (2)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿರುವ ಹಂತದಲ್ಲಿ ನಿಗದಿಗೊಳಿಸತಕ್ಕದ್ದು.

(3) ನಾಲ್ಕನೇ ಅನುಸೂಚಿಯ (2)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾದ ವೈಯಕ್ತಿಕ ವೇತನವನ್ನು ಬಡ್ತಿಯ ಮೇಲೆ ವೇತನವನ್ನು ನಿಗದಿಗೊಳಿಸುವುದು ಸೇರಿದಂತೆ ಎಲ್ಲಾ ಉದ್ದೇಶಗಳಿಗಾಗಿ ವೇತನ ಎಂದು ಪರಿಗಣಿಸತಕ್ಕದ್ದು.

(4) ಸರ್ಕಾರಿ ನೌಕರನೊಬ್ಬನ 'ಮೂಲ ವೇತನ'ವು ನಾಲ್ಕನೇ ಅನುಸೂಚಿಯ (1)ನೇ ಅಂಕಣದಲ್ಲಿ ಕಾಣಬರದಿದ್ದರೆ ಅಂಥ ಪ್ರಕರಣವನ್ನು ಆದೇಶಗಳಿಗಾಗಿ ಸರ್ಕಾರಕ್ಕೆ ಕಳುಹಿಸತಕ್ಕದ್ದು.

(5) (ಅ) ಸರ್ಕಾರಿ ನೌಕರನು 2012ರ ಏಪ್ರಿಲ್ 1 ರಂದು ಅಥವಾ ಆನಂತರ ಸೇವೆಗೆ ಸೇರಿದರೆ, ಅವನ ವೇತನವನ್ನು ಕರ್ನಾಟಕ ನಾಗರಿಕ ಸೇವಾ ನಿಯಮಗಳ ಉಪಬಂಧಗಳಿಗನುಗುಣವಾಗಿ ಅವನು ನೇಮಕವಾಗಿರುವಂಥ ಹುದ್ದೆಗೆ ಅನ್ವಯವಾಗುವ 'ಪರಿಷ್ಕೃತ ವೇತನ ಶ್ರೇಣಿ'ಯಲ್ಲಿ ನಿಗದಿಗೊಳಿಸತಕ್ಕದ್ದು.

(ಆ) ಸರ್ಕಾರಿ ನೌಕರನು 2012ರ ಏಪ್ರಿಲ್ 1 ರಂದು ಅಥವಾ ಆನಂತರ ಆ ದಿನಾಂಕಕ್ಕೆ ಮುಂಚಿತವಾಗಿ ಅವನು ಧಾರಣ ಮಾಡಿರದ ಯಾವುದೇ ಹುದ್ದೆಗೆ ಬಡ್ತಿ ಹೊಂದಿದ್ದರೆ ಅಥವಾ ನೇಮಕವಾಗಿದ್ದರೆ ಅವನ ವೇತನವನ್ನು, ಈ ನಿಯಮದ (1) ರಿಂದ (4) ರ ವರೆಗಿನ ಉಪ-ನಿಯಮಗಳ ಉಪಬಂಧಗಳಿಗನುಗುಣವಾಗಿ 2012ರ ಏಪ್ರಿಲ್ 1 ಕ್ಕೆ ಮುಂಚಿತವಾಗಿ ಅವನು ಧಾರಣ ಮಾಡಿದ್ದ ಹುದ್ದೆಗೆ ಅನ್ವಯವಾಗುವ 'ಪರಿಷ್ಕೃತ ಶ್ರೇಣಿ'ಯಲ್ಲಿ ನಿಗದಿಗೊಳಿಸತಕ್ಕದ್ದು ಮತ್ತು ಆನಂತರ, ಹಾಗೆ ನಿಗದಿಗೊಳಿಸಲಾದ ವೇತನದ ಆಧಾರದ ಮೇಲೆ, ಅವನ

ವೇತನವನ್ನು ಕರ್ನಾಟಕ ನಾಗರಿಕ ಸೇವಾ ನಿಯಮಗಳ ಉಪಬಂಧಗಳಿಗನುಗುಣವಾಗಿ ಅವನು ಬಡ್ತಿ ಹೊಂದಿದ ಅಥವಾ ನೇಮಕಗೊಂಡ ಹುದ್ದೆಗೆ ಅನ್ವಯವಾಗುವಂಥ ವೇತನ ಶ್ರೇಣಿಯಲ್ಲಿ ನಿಗದಿಗೊಳಿಸತಕ್ಕದ್ದು.

(6) ಸರ್ಕಾರಿ ನೌಕರನಿಗೆ 2012ರ ಏಪ್ರಿಲ್ 1 ರಂದು ಅಥವಾ ಆನಂತರ 'ಆಯ್ಕೆಕಾಲಿಕ ಶ್ರೇಣಿ' ಅಥವಾ 'ಹಿರಿಯ ವೇತನ ಶ್ರೇಣಿ' ಮಂಜೂರಾಗಿದ್ದರೆ ಅವನು ಧಾರಣ ಮಾಡಿದ ಹುದ್ದೆಗೆ ಅನ್ವಯವಾಗುವ 'ಪರಿಷ್ಕೃತ ವೇತನ ಶ್ರೇಣಿ' ಯಲ್ಲಿನ ಅವನ ವೇತನವನ್ನು ಈ ನಿಯಮದ (1) ರಿಂದ (4)ರ ವರೆಗಿನ ಉಪ-ನಿಯಮಗಳ ಉಪಬಂಧಗಳಿಗನುಗುಣವಾಗಿ ನಿಗದಿಗೊಳಿಸತಕ್ಕದ್ದು ಮತ್ತು ಆನಂತರ, ಹಾಗೆ ನಿಗದಿಗೊಳಿಸಲಾದ ವೇತನದ ಆಧಾರದ ಮೇಲೆ, ಅವನ ವೇತನವನ್ನು ಆಯ್ಕೆಕಾಲಿಕ ವೇತನ ಶ್ರೇಣಿಯಲ್ಲಿ ಅಥವಾ ಹಿರಿಯ ವೇತನ ಶ್ರೇಣಿಯಲ್ಲಿ, ಸಂದರ್ಭಾನುಸಾರ, 1983ರ ಕರ್ನಾಟಕ ನಾಗರಿಕ ಸೇವಾ (ಕಾಲಬದ್ಧ ಬಡ್ತಿ) ನಿಯಮಗಳ 4ನೇ ನಿಯಮಕ್ಕನುಗುಣವಾಗಿ ಆಯ್ಕೆಕಾಲಿಕ ವೇತನ ಶ್ರೇಣಿಯಲ್ಲಿ ಅಥವಾ 1991ರ ಕರ್ನಾಟಕ ನಾಗರಿಕ ಸೇವೆಗಳು (ಹಿರಿಯ ಶ್ರೇಣಿಗೆ ಸ್ವಯಂಚಾಲಿತ ವಿಶೇಷ ಮುಂಬಡ್ತಿ ನೀಡುವಿಕೆ) ನಿಯಮಗಳ 7ನೇ ನಿಯಮಕ್ಕನುಗುಣವಾಗಿ ಹಿರಿಯ ವೇತನ ಶ್ರೇಣಿಯಲ್ಲಿ ನಿಗದಿಗೊಳಿಸತಕ್ಕದ್ದು.

(7) ಈ ನಿಯಮದ (2) ಅಥವಾ (4) ನೇ ಉಪ-ನಿಯಮದ ಮೇರೆಗಿನ ವೇತನ ನಿಗದಿಯಲ್ಲಿ, 2012ರ ಏಪ್ರಿಲ್ 1 ರ ನಿಕಟಪೂರ್ವದಲ್ಲಿ ಅದೇ ಪದ ವೃಂದದಲ್ಲಿ ತನಗಿಂತ ಕಿರಿಯನಾಗಿರುವ ಸರ್ಕಾರಿ ನೌಕರನ ವೇತನಕ್ಕಿಂತ ಹೆಚ್ಚಿನ ವೇತನವನ್ನು ಪಡೆಯುತ್ತಿದ್ದ ಒಬ್ಬ ಸರ್ಕಾರಿ ನೌಕರನ ವೇತನವು ಪರಿಷ್ಕೃತ ವೇತನ ಶ್ರೇಣಿಯಲ್ಲಿ ಕಿರಿಯ ಸರ್ಕಾರಿ ನೌಕರನ ವೇತನಕ್ಕಿಂತ ಕೆಳಗಿನ ಹಂತಕ್ಕೆ ನಿಗದಿಯಾಗಿದ್ದರೆ, ಅವನ ವೇತನವನ್ನು ಆ ಕಿರಿಯ ನೌಕರನು ಪರಿಷ್ಕೃತ ವೇತನ ಶ್ರೇಣಿಯಲ್ಲಿ ಪಡೆಯುತ್ತಿರುವ ವೇತನದ ಹಂತಕ್ಕೆ ಏರಿಸತಕ್ಕದ್ದು.

(8) 2012ರ ಏಪ್ರಿಲ್ 1 ಕ್ಕೆ ಮುಂಚಿತವಾಗಿ ಉನ್ನತ ಹುದ್ದೆಗೆ ಬಡ್ತಿ ಹೊಂದಿದ ಹಿರಿಯ ಸರ್ಕಾರಿ ನೌಕರನು ಪರಿಷ್ಕೃತ ವೇತನ ಶ್ರೇಣಿಯಲ್ಲಿ, 2012ರ ಏಪ್ರಿಲ್ 1 ರಂದು ಅಥವಾ ಆನಂತರ ಉನ್ನತ ಹುದ್ದೆಗೆ ಬಡ್ತಿ ಹೊಂದಿದ ತನ್ನ ಕಿರಿಯ ನೌಕರನ ವೇತನಕ್ಕಿಂತ ಕಡಿಮೆ ವೇತನ ಪಡೆಯುತ್ತಿದ್ದರೆ, ಹಿರಿಯ ಸರ್ಕಾರಿ ನೌಕರನ ವೇತನವನ್ನು ಉನ್ನತ ಹುದ್ದೆಯಲ್ಲಿ ಅವನ ಕಿರಿಯ ನೌಕರನಿಗೆ ನಿಗದಿಗೊಳಿಸುವ ವೇತನಕ್ಕೆ ಸಮನಾದ ಮೊತ್ತಕ್ಕೆ ಏರಿಸತಕ್ಕದ್ದು. ಈ ರೀತಿ ವೇತನ ಏರಿಕೆಯನ್ನು ಕಿರಿಯ ಸರ್ಕಾರಿ ನೌಕರನು ಬಡ್ತಿ ಹೊಂದಿದ ದಿನಾಂಕದಿಂದ ಜಾರಿಗೆ ಬರುವಂತೆ, ಈ ಮುಂದಿನ ಷರತ್ತುಗಳನ್ನು ಈಡೇರಿಸುವುದಕ್ಕೊಳಪಟ್ಟು, ಮಾಡತಕ್ಕದ್ದು, ಎಂದರೆ:-

(ಅ) ಅವರ ಬಡ್ತಿಗೆ ಮುನ್ನ, ಹಿರಿಯ ಮತ್ತು ಕಿರಿಯ ಸರ್ಕಾರಿ ನೌಕರರು ಧಾರಣ ಮಾಡಿರುವ ಹುದ್ದೆಗಳು ಒಂದೇ ಪದ ವೃಂದಕ್ಕೆ ಸೇರಿರಬೇಕು ಮತ್ತು ಅವರು ಬಡ್ತಿ ಹೊಂದಿದ ಹುದ್ದೆಗಳು ಒಂದೇ ಪದ ವೃಂದಕ್ಕೆ ಸೇರಿರತಕ್ಕದ್ದು;

(ಆ) ಅವರು ವೇತನ ಪಡೆಯಲು ಅರ್ಹರಾಗಿರುವಂಥ ಕೆಳಗಿನ ಮತ್ತು ಉನ್ನತ ಹುದ್ದೆಗಳ ಪ್ರಸಕ್ತ ವೇತನ ಶ್ರೇಣಿ ಮತ್ತು ಪರಿಷ್ಕೃತ ವೇತನ ಶ್ರೇಣಿ ಸರಿಸಮಾನವಾಗಿರತಕ್ಕದ್ದು;

(ಇ) ಕಿರಿಯ ಸರ್ಕಾರಿ ನೌಕರನು ಕೆಳಗಿನ ಹುದ್ದೆಯ ಪ್ರಸಕ್ತ ವೇತನ ಶ್ರೇಣಿಯಲ್ಲಿ ಹಿರಿಯ ಸರ್ಕಾರಿ ನೌಕರನಿಗಿಂತ ಹೆಚ್ಚು ವೇತನವನ್ನು ಪಡೆದಿರಬಾರದು; ಮತ್ತು

(ಈ) 'ಪರಿಷ್ಕೃತ ವೇತನ ಶ್ರೇಣಿ'ಯಲ್ಲಿ ಅಂಥ ಬಡ್ತಿಯಿಂದಾಗಿ ವೇತನ ನಿಗದಿಯನ್ನು ಕ್ರಮಬದ್ಧಗೊಳಿಸುವ ಕರ್ನಾಟಕ ನಾಗರಿಕ ಸೇವಾ ನಿಯಮಗಳು ಅಥವಾ ಯಾವುದೇ ಇತರ ನಿಯಮ ಅಥವಾ ಆದೇಶದ ಅನ್ವಯದ ನೇರ ಪರಿಣಾಮದಿಂದಾಗಿ ಅಂಥ ತಾರತಮ್ಯ ಉಂಟಾಗಿದ್ದಿರಬೇಕು.

**8. 'ಪರಿಷ್ಕೃತ ವೇತನ ಶ್ರೇಣಿ'ಯಲ್ಲಿ ಮುಂದಿನ ವಾರ್ಷಿಕ ವೇತನ ಬಡ್ತಿಯ ದಿನಾಂಕ:–**

(1) ಸರ್ಕಾರಿ ನೌಕರನ ಪ್ರಾರಂಭಿಕ ವೇತನವನ್ನು 7ನೇ ನಿಯಮದ (1) ರಿಂದ (4) ರ ವರೆಗಿನ ಉಪ–ನಿಯಮಗಳ ಉಪಬಂಧಗಳಿಗನುಗುಣವಾಗಿ 2012ರ ಏಪ್ರಿಲ್ 1 ರಿಂದ ಜಾರಿಗೆ ಬರುವಂತೆ 'ಪರಿಷ್ಕೃತ ವೇತನ ಶ್ರೇಣಿ'ಯಲ್ಲಿ ನಿಗದಿಗೊಳಿಸಿದ ಆನಂತರ, ಅದರ ಮುಂದಿನ ವಾರ್ಷಿಕ ವೇತನ ಬಡ್ತಿಯು, ಅವನು 'ಪ್ರಸಕ್ತ ವೇತನ ಶ್ರೇಣಿ'ಯಲ್ಲಿಯೇ ಮುಂದುವರಿದಿದ್ದರೆ 'ಪ್ರಸಕ್ತ ವೇತನ ಶ್ರೇಣಿ'ಯಲ್ಲಿ ಅವನಿಗೆ ಯಾವಾಗ ವೇತನ ಬಡ್ತಿಯು ಪ್ರಾಪ್ತವಾಗುತ್ತಿತ್ತೋ ಆ ದಿನಾಂಕದಂದು ಪ್ರಾಪ್ತವಾಗತಕ್ಕದ್ದು ಮತ್ತು ಸರ್ಕಾರ ಹೊರಡಿಸುವಂಥ ನಿಯಮಗಳು ಅಥವಾ ಸಾಮಾನ್ಯ ಅಥವಾ ವಿಶೇಷ ಆದೇಶಗಳ ಮೇರೆಗೆ ಅವನಿಗೆ ಬರಬೇಕಾಗಿರುವ ಮತ್ತು ದೊರೆಯುವಂಥ ಯಾವುದೇ ಸ್ಥಗಿತ ವೇತನ ಬಡ್ತಿ ಸದರಿ ನಿಯಮಗಳು ಅಥವಾ ಆದೇಶಗಳಿಗನುಗುಣವಾಗಿ 'ಪರಿಷ್ಕೃತ ವೇತನ ಶ್ರೇಣಿ'ಯಲ್ಲಿ ಮಂಜೂರು ಮಾಡತಕ್ಕದ್ದು;

ಪರಂತು ಸರ್ಕಾರಿ ನೌಕರನಿಗೆ ವಾರ್ಷಿಕ ವೇತನ ಬಡ್ತಿ/ಸ್ಥಗಿತ ವೇತನ ಬಡ್ತಿ, 'ಪ್ರಸಕ್ತ ವೇತನ ಶ್ರೇಣಿ'ಯಲ್ಲಿ ವಾಡಿಕೆಯ ಕ್ರಮದಲ್ಲಿ 2012ರ ಏಪ್ರಿಲ್ 1 ರ ತರುವಾಯದಲ್ಲಿ ಆದರೆ 2013ರ ಏಪ್ರಿಲ್ 1 ಕ್ಕಿಂತ ಮೊದಲು ಪ್ರಾಪ್ತವಾಗುತ್ತಿದ್ದಲ್ಲಿ 'ಪರಿಷ್ಕೃತ ವೇತನ ಶ್ರೇಣಿ'ಯಲ್ಲಿ ಆತನ ವೇತನವನ್ನು, ಅವನಿಗೆ ಅನುಕೂಲವಾಗುವಂತಿದ್ದರೆ, 7 ನೇ ನಿಯಮದ (1) ಮತ್ತು (3)ನೇ ಉಪ–ನಿಯಮ ಅಥವಾ (4)ನೇ ಉಪ–ನಿಯಮದ ಉಪಬಂಧಗಳಿಗೆ ಅನುಸಾರವಾಗಿ ಅಂಥ ವೇತನ ಬಡ್ತಿಯು ಪ್ರಾಪ್ತವಾಗುವ ದಿನಾಂಕದಿಂದ ಪುನ: ನಿಗದಿಪಡಿಸತಕ್ಕದ್ದು.

(2) ಈ ನಿಯಮದ (1)ನೇ ಉಪ–ನಿಯಮದ ಪರಂತುಕದ ಮೇರೆಗೆ ಸರ್ಕಾರಿ ನೌಕರನ ವೇತನವನ್ನು ಪುನ: ನಿಗದಿಗೊಳಿಸಿದಲ್ಲಿ ಅಥವಾ ಈ ನಿಯಮಗಳ 7 ನೇ ನಿಯಮದ (2)ನೇ ಉಪ–ನಿಯಮ ಅಥವಾ (8)ನೇ ಉಪ–ನಿಯಮದ ಉಪಬಂಧಗಳಿಗೆ ಅನುಸಾರವಾಗಿ ವೇತನವನ್ನು ಹೆಚ್ಚಿಸಿದಲ್ಲಿ, ಮುಂದಿನ ವೇತನ ಬಡ್ತಿಯು, ವೇತನವನ್ನು ಪುನ: ನಿಗದಿಗೊಳಿಸಿದ ಅಥವಾ ಹೆಚ್ಚಿಸಿದ ದಿನಾಂಕದಿಂದ ಒಂದು ಪೂರ್ಣ ವೇತನ ಬಡ್ತಿ ಅವಧಿಯನ್ನು ಪೂರ್ಣಗೊಳಿಸಿದ ಮೇಲೆ ಅವನಿಗೆ ಪ್ರಾಪ್ತವಾಗತಕ್ಕದ್ದು. ಈ ಉದ್ದೇಶಕ್ಕಾಗಿ ವೇತನ ಬಡ್ತಿಯ ಅವಧಿಯನ್ನು ಕರ್ನಾಟಕ ನಾಗರಿಕ ಸೇವಾ ನಿಯಮಗಳ 51 ಮತ್ತು 53ನೇ ನಿಯಮಗಳ ಉಪಬಂಧಗಳಿಗನುಸಾರವಾಗಿ ನಿರ್ಧರಿಸತಕ್ಕದ್ದು.

**9. 'ಪರಿಷ್ಕೃತ ವೇತನ ಶ್ರೇಣಿ'ಯಲ್ಲಿ ವೇತನ ನಿಗದಿಯಿಂದಾಗಿ ಹಣಕಾಸಿನ ಪ್ರಯೋಜನಕ್ಕೆ ಅರ್ಹತೆ:–**

ಸರ್ಕಾರಿ ನೌಕರನು ಪರಿಷ್ಕೃತ ವೇತನ ಶ್ರೇಣಿಯಲ್ಲಿನ ವೇತನ ನಿಗದಿಯಿಂದಾಗಿ ಅಥವಾ ಪುನರ್ ನಿಗದಿಯಿಂದಾಗಿ ವೇತನ, ಭತ್ಯೆಗಳು ಮತ್ತು ನಿವೃತ್ತಿ ವೇತನದ ಹೆಚ್ಚಳಕ್ಕೆ ದಿನಾಂಕ 1ನೇ ಏಪ್ರಿಲ್ 2012 ರಿಂದ ಅರ್ಹನಾಗುತ್ತಾನೆ.

**10. ಪದ ವೃಂದಗಳನ್ನು ವಿಲೀನಗೊಳಿಸುವುದು:-** ಕ್ರಮಬದ್ಧ ಶ್ರೇಣಿ ಬಡ್ತಿಯಲ್ಲಿ ಎರಡು ಬೇರೆ ಬೇರೆ ಪದ ವೃಂದಗಳಲ್ಲಿನ ಹುದ್ದೆಗಳಿಗೆ ಅನ್ವಯಿಸುವ ಪರಿಷ್ಕೃತ ವೇತನ ಶ್ರೇಣಿಗಳು ಸಮನಾಗಿದ್ದಲ್ಲಿ, ಅವುಗಳಿಗೆ ಮಾಡುವ ನೇಮಕಾತಿಯನ್ನು ಕ್ರಮಗೊಳಿಸುವ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ, ಆ ಪದ ವೃಂದಗಳನ್ನು ವಿಲೀನಗೊಳಿಸಲಾಗಿದೆ ಎಂದು ಭಾವಿಸತಕ್ಕದ್ದು ಮತ್ತು ಸರ್ಕಾರಿ ರಾಜ್ಯಪತ್ರದಲ್ಲಿ ಈ ನಿಯಮಗಳು ಪ್ರಕಟಗೊಂಡ ದಿನಾಂಕದಿಂದ, ಅಂಥ ಒಂದು ಪದ ವೃಂದದಿಂದ ಇನ್ನೊಂದು ಪದ ವೃಂದಕ್ಕೆ ಯಾವುದೇ ಮುಂಬಡ್ತಿಯನ್ನು ನೀಡಲು ಅನುಮತಿಸತಕ್ಕದ್ದಲ್ಲ.

**11. ತೊಂದರೆಗಳನ್ನು ನಿವಾರಿಸುವ ಅಧಿಕಾರ:-** ಈ ನಿಯಮಗಳ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ಸರ್ಕಾರವು, ಆದೇಶವನ್ನು ಹೊರಡಿಸುವ ಮೂಲಕ ಅಂಥ ತೊಂದರೆಗಳನ್ನು ನಿವಾರಿಸಲು ಅಗತ್ಯವೆಂದು ತನಗೆ ಕಂಡುಬರುವಂಥ ಉಪಬಂಧಗಳನ್ನು ಮಾಡಬಹುದು ಅಥವಾ ನಿರ್ದೇಶನಗಳನ್ನು ನೀಡಬಹುದು.

**12. ನಿಯಮಗಳ ಅಧ್ಯಾರೋಹಿ ಪರಿಣಾಮ:-** 1978ರ ಕರ್ನಾಟಕ ನಾಗರಿಕ ಸೇವಾ ಅಧಿನಿಯಮದ ಮೇರೆಗೆ ಅಥವಾ ಯಾವುದೇ ಕಾನೂನಿನಡಿಯಲ್ಲಿ ರಚಿಸಲ್ಪಟ್ಟ ಅಥವಾ ರಚಿಸಲಾಗಿದೆ ಎಂದು ಭಾವಿಸಲ್ಪಟ್ಟ ಯಾವುದೇ ನಿಯಮವು ಈ ನಿಯಮಗಳ ಯಾವುದೇ ಉಪಬಂಧಗಳೊಂದಿಗೆ ಅಸಂಗತವಾಗಿರುವಷ್ಟರ ಮಟ್ಟಿಗೆ ಪರಿಣಾಮಕಾರಿಯಾಗತಕ್ಕದ್ದಲ್ಲ.

**13. ನಿಯಮಗಳನ್ನು ಸಡಿಲಗೊಳಿಸುವ ಅಧಿಕಾರ:-** ಈ ನಿಯಮಗಳ ಯಾವುದೇ ಉಪಬಂಧಗಳನ್ನು ಕಾರ್ಯಗತಗೊಳಿಸುವುದರಿಂದ ಯಾವುದೇ ನಿರ್ದಿಷ್ಟ ಪ್ರಕರಣದಲ್ಲಿ ಅನುಚಿತ ತೊಂದರೆ ಉಂಟಾಗುತ್ತದೆಂದು ಸರ್ಕಾರಕ್ಕೆ ಮನದಟ್ಟಾದರೆ, ಅದು, ಆದೇಶವನ್ನು ಹೊರಡಿಸುವ ಮೂಲಕ, ಅಷ್ಟರ ಮಟ್ಟಿಗೆ ಮತ್ತು ನ್ಯಾಯಯುತವಾಗಿ ಮತ್ತು ಸಮಾನ ರೀತಿಯಲ್ಲಿ ಆ ಪ್ರಕರಣದ ಬಗ್ಗೆ ವ್ಯವಹರಿಸಲು ಅವಶ್ಯವೆಂದು ಭಾವಿಸಬಹುದಾದಂತಹ ಷರತ್ತುಗಳಿಗೊಳಪಟ್ಟು ಆ ನಿಯಮದ ಅಗತ್ಯತೆಗಳನ್ನು ವಿನಾಯತಿಗೊಳಿಸಬಹುದು ಅಥವಾ ಸಡಿಲಗೊಳಿಸಬಹುದು.

**14. ಅರ್ಥ ವಿವರಣೆ:-** ಈ ನಿಯಮಗಳ ಅರ್ಥ ವಿವರಣೆಗೆ ಸಂಬಂಧಪಟ್ಟಂತೆ ಯಾವುದೇ ಪ್ರಶ್ನೆಯು ಉದ್ಭವಿಸಿದರೆ, ತೀರ್ಮಾನಕ್ಕಾಗಿ ಅದನ್ನು ಸರ್ಕಾರಕ್ಕೆ ಕಳುಹಿಸತಕ್ಕದ್ದು ಮತ್ತು ಅದರ ತೀರ್ಮಾನವು ಅಂತಿಮವಾಗಿರತಕ್ಕದ್ದು.

**15. 1983ರ ಕರ್ನಾಟಕ ನಾಗರಿಕ ಸೇವಾ (ಕಾಲಬದ್ಧ ಬಡ್ತಿ) ನಿಯಮಗಳಿಗೆ ತಿದ್ದುಪಡಿ:-** 1983ರ ಕರ್ನಾಟಕ ನಾಗರಿಕ ಸೇವಾ (ಕಾಲಬದ್ಧ ಬಡ್ತಿ) ನಿಯಮಗಳ ಅನುಸೂಚಿಗೆ ಬದಲಾಗಿ ಈ ನಿಯಮಗಳ ಎರಡನೇ ಅನುಸೂಚಿಯನ್ನು ಪ್ರತ್ಯಾಯೋಜಿಸತಕ್ಕದ್ದು.

**16. 1991ರ ಕರ್ನಾಟಕ ನಾಗರಿಕ ಸೇವಾ (ಹಿರಿಯ ವೇತನ ಶ್ರೇಣಿಗೆ ಸ್ವಯಂಚಾಲಿತ ವಿಶೇಷ ಮುಂಬಡ್ತಿ ನೀಡುವಿಕೆ) ನಿಯಮಗಳಿಗೆ ತಿದ್ದುಪಡಿ:–** 1991ರ ಕರ್ನಾಟಕ ನಾಗರಿಕ ಸೇವಾ (ಹಿರಿಯ ವೇತನ ಶ್ರೇಣಿಗೆ ಸ್ವಯಂಚಾಲಿತ ವಿಶೇಷ ಮುಂಬಡ್ತಿ ನೀಡುವಿಕೆ) ನಿಯಮಗಳ 1ನೇ ನಿಯಮದ (3)ನೇ ಉಪ–ನಿಯಮದ ಕೆಳಗಿನ ಕೋಷ್ಟಕದ ಬದಲಾಗಿ ಈ ನಿಯಮಗಳ ಮೂರನೇ ಅನುಸೂಚಿಯಲ್ಲಿ ಸೂಚಿಸಲಾದ ಕೋಷ್ಟಕವನ್ನು ಪ್ರತ್ಯಾಯೋಜಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಸುಂದರ ರಾಜ ಗುಪ್ತ)
ಸರ್ಕಾರದ ಉಪ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸೇವೆಗಳು–2)

### ಮೊದಲನೆಯ ಅನುಸೂಚಿ
### [ನಿಯಮ 4(1) ನೋಡಿ]
### ಭಾಗ – ಎ

| ಕ್ರಮ ಸಂಖ್ಯೆ | ಪ್ರಸಕ್ತ ವೇತನ ಶ್ರೇಣಿಗಳು ರೂ. | ಪರಿಷ್ಕೃತ ವೇತನ ಶ್ರೇಣಿಗಳು ರೂ. |
|---|---|---|
| (1) | (2) | (3) |
| 1 | 4800–100–6000–125–6500–150–7100–175–7275 | 9600–200–12000–250–13000–300–14200–350–14550 |
| 2 | 5200–100–6000–125–6500–150–7100–175–7800–200–8200 | 10400–200–12000–250–13000–300–14200–350–15600–400–16400 |
| 3 | 5500–100–6000–125–6500–150–7100–175–7800–200–8600–225–9500 | 11000–200–12000–250–13000–300–14200–350–15600–400–17200–450–19000 |
| 4 | 5800–100–6000–125–6500–150–7100–175–7800–200–8600–225–9500–250–10500 | 11600–200–12000–250–13000–300–14200–350–15600–400–17200–450–19000–500–21000 |
| 5 | 6250–125–6500–150–7100–175–7800–200–8600–225–9500–250–10500–300–12000 | 12500–250–13000–300–14200–350–15600–400–17200–450–19000–500–21000–600–24000 |
| 6 | 6800–150–7100–175–7800–200–8600–225–9500–250–10500–300–12300–350–13000 | 13600–300–14200–350–15600–400–17200–450–19000–500–21000–600–24600–700–26000 |
| 7 | 7275–175–7800–200–8600–225–9500–250–10500–300–12300–350–13350 | 14550–350–15600–400–17200–450–19000–500–21000–600–24600–700–26700 |
| 8 | 8000–200–8600–225–9500–250–10500–300–12300–350–14400–400–14800 | 16000–400–17200–450–19000–500–21000–600–24600–700–28800–800–29600 |
| 9 | 8825–225–9500–250–10500–300–12300–350–14400–400–16000 | 17650–450–19000–500–21000–600–24600–700–28800–800–32000 |

| | | |
|---|---|---|
| 10 | 9500–250–10500–300–12300–350–14400–400–16800–450–17250 | 19000–500–21000–600–24600–700–28800–800–33600–900–34500 |
| 11 | 10000–250–10500–300–12300–350–14400–400–16800–450–18150 | 20000–500–21000–600–24600–700–28800–800–33600–900–36300 |
| 12 | 10800–300–12300–350–14400–400–16800–450–19500–525–20025 | 21600–600–24600–700–28800–800–33600–900–39000–1050–40050 |
| 13 | 11400–300–12300–350–14400–400–16800–450–19500–525–21600 | 22800–600–24600–700–28800–800–33600–900–39000–1050–43200 |
| 14 | 12000–300–12300–350–14400–400–16800–450–19500–525–22650 | 24000–600–24600–700–28800–800–33600–900–39000–1050–45300 |
| 15 | 13000–350–14400–400–16800–450–19500–525–22650–600–23850 | 26000–700–28800–800–33600–900–39000–1050–45300–1200–47700 |
| 16 | 14050–350–14400–400–16800–450–19500–525–22650–600–25050 | 28100–700–28800–800–33600–900–39000–1050–45300–1200–50100 |
| 17 | 15200–400–16800–450–19500–525–22650–600–25650 | 30400–800–33600–900–39000–1050–45300–1200–51300 |
| 18 | 16400–400–16800–450–19500–525–22650–600–26250 | 32800–800–33600–900–39000–1050–45300–1200–52500 |
| 19 | 18150–450–19500–525–22650–600–26250–675–26925 | 36300–900–39000–1050–45300–1200–52500–1350–53850 |
| 20 | 19050–450–19500–525–22650–600–26250–675–27600 | 38100–900–39000–1050–45300–1200–52500–1350–55200 |
| 21 | 20025–525–22650–600–26250–675–28275 | 40050–1050–45300–1200–52500–1350–56550 |
| 22 | 22125–525–22650–600–26250–675–30300 | 44250–1050–45300–1200–52500–1350–60600 |

| | | |
|---|---|---|
| 23 | 24450–600–26250–675–30300–750–31800 | 48900–1200–52500–1350–60600–1500–63600 |
| 24 | 26250–675–30300–750–34800–850–36500 | 52500–1350–60600–1500–69600–1700–73000 |
| 25 | 28275–675–30300–750–34800–850–39900 | 56550–1350–60600–1500–69600–1700–79800 |